## ಪ್ರಾರ್ಥನೆ

# ಶ್ರೀರಾಜರಾಜೇಶ್ವರೀ ಅಷ್ಟಕಮ್ – ೨



**ಅಂಬಾ ರೌದ್ರಿಣಿ ಭದ್ರಕಾಲಿ ಬಗಲಾ ಜ್ವಾಲಾಮುಖೀ ವೈಷ್ಣವೀ**
**ಬ್ರಹ್ಮಾಣೀ ತ್ರಿಪುರಾಂತಕೀ ಸುರನುತಾ ದೇದೀಪ್ಯಮಾನೋಜ್ಜ್ವಲಾ।**
**ಚಾಮುಂಡಾ ಶ್ರಿತರಕ್ಷಪೋಷಜನನೀ ದಾಕ್ಷಾಯಣೀ ವಲ್ಲವೀ**
**ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ ೪ ॥**

ಅಮ್ಮಾ, ರೌದ್ರಿಣಿ, ಭದ್ರಕಾಳೀ, ಬಗಲಾ, ಜ್ವಾಲಾಮುಖೀ, ವೈಷ್ಣವೀ, ಬ್ರಹ್ಮಾಣೀ ಮೊದಲಾದ ವಿಭಿನ್ನ ರೂಪಗಳನ್ನು ನೀನು ಧರಿಸಿರುವೆ. ತ್ರಿಪುರಸಂಹಾರಕಾರಿಣಿಯಾದ, ದೇವತೆಗಳಿಂದ ಸ್ತುತಿಸಲ್ಪಡುವ, ಮಿರುಗುವ ಕಾಂತಿಯಿಂದ ಪ್ರಜ್ವಲಿಸುತ್ತಿರುವ, ಆಶ್ರಿತರನ್ನು ರಕ್ಷಿಸಿ ಪೋಷಿಸುವ ಜನನಿ ಚಾಮುಂಡೇಶ್ವರಿ ನೀನು. ದಾಕ್ಷಾಯಣಿ, ಗೊಲ್ಲಸ್ತ್ರೀಯಾದ ರಾಧೆ, ಜ್ಞಾನಸ್ವರೂಪಿಣಿ ಪರದೇವತೆ, ಭಗವತಿ, ನೀನೇ ಶ್ರೀ ರಾಜರಾಜೇಶ್ವರಿಯಾಗಿರುವೆ.

**ಅಂಬಾ ಶೂಲಧನುಃ ಕುಶಾಂಕುಶಧರೀ ಅರ್ಧೇಂದುಬಿಂಬಾಧರೀ**
**ವಾರಾಹೀ ಮಧುಕೈಟಭಪ್ರಶಮನೀ ವಾಣೀರಮಾಸೇವಿತಾ ।**
**ಮಲ್ಲಾದ್ಯಾಸುರಮೂಕದೈತ್ಯದಮನೀ ಮಾಹೇಶ್ವರೀ ಅಂಬಿಕಾ**
**ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ ೫ ॥**

ಅಮ್ಮಾ, ಶೂಲ, ಧನುಸ್ಸು, ಪಾಶ, ಅಂಕುಶಗಳನ್ನು ಧರಿಸಿರುವ, ಅರ್ಧಚಂದ್ರನಂತೆ ಮುಖವುಳ್ಳ, ತೊಂಡೆಹಣ್ಣಿನಂತೆ ತುಟಿಗಳುಳ್ಳ, ಮಧುಕೈಟಭರನ್ನು ಸಂಹರಿಸಿದ, ಲಕ್ಷ್ಮೀಸರಸ್ವತಿಯರಿಂದ ಸೇವಿಸಲ್ಪಡುವ, ಮಲ್ಲ ಮೊದಲಾದ ಅಸುರರನ್ನೂ, ಮೂಕಾಸುರನನ್ನೂ ದಮನ ಮಾಡಿದ, ಮಹೇಶ್ವರ ವರಾಹ ಇವರ ಶಕ್ತಿಸ್ವರೂಪಿಣಿಯಾದ ಮಾಹೇಶ್ವರೀ ಹಾಗೂ ವಾರಾಹಿಯು ನೀನೇ. ಜ್ಞಾನ ರೂಪಿಣಿ, ಪರದೇವತೆ, ಮಾತೃಸ್ವರೂಪಿಣಿಯಾದ ಭಗವತಿ, ನೀನೇ ಶ್ರೀ ರಾಜರಾಜೇಶ್ವರಿಯಾಗಿರುವೆ.

**ಅಂಬಾ ಸೃಷ್ಟಿವಿನಾಶಪಾಲನಕರೀ ಆರ್ಯಾವಿಶಂಶೋಭಿತಾ**
**ಗಾಯತ್ರೀ ಪ್ರಣವಾಕ್ಷರಾಮೃತರಸಾ ಪೂರ್ಣಾನುಸಂಧೀಕೃತಾ ।**
**ಓಂಕಾರೀ ವಿನತಾಸುತಾರ್ಚಿತಪದಾ ಉದ್ದಂಡದೈತ್ಯಾಪಹಾ**
**ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ ೬ ॥**

ಅಮ್ಮಾ, ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳನ್ನು ನೀನೇ ಮಾಡುವೆ. ಶ್ರೇಷ್ಠವಾದ ಚಿತ್ತವೃತ್ತಿಯುಳ್ಳವರಲ್ಲಿ ಶೋಭಿಸುವ ಗಾಯತ್ರೀ ಸ್ವರೂಪಿಣಿಯೂ ನೀನೆ. ಪ್ರಣವಾಕ್ಷರವು ಸುರಿಸುವ ಅಮೃತರಸದಿಂದ ಪೂರ್ಣವಾಗಿ ಅನುಸಂಧಾನ ಮಾಡಲ್ಪಟ್ಟ, ಓಂಕಾರ ಸ್ವರೂಪಿಣಿ ನೀನಾಗಿರುವೆ. ಗರುಡನು ಅರ್ಚಿಸಿದ ಪಾದಗಳು ನಿನ್ನವು. ದರ್ಪಿಷ್ಠರಾದ ದೈತ್ಯರನ್ನು ಸಂಹರಿಸಿದವಳು ನೀನು. ಜ್ಞಾನರೂಪಿಣಿ, ಪರದೇವತೆ, ಮಾತೃಸ್ವರೂಪಿಣಿಯಾದ ಭಗವತಿ, ನೀನೇ ಶ್ರೀ ರಾಜ

## ಸೂಕ್ತಿಪ್ರಭ

**ಯತ್ ಶ್ರುತಂ ನ ವಿರಾಗಾಯ**
**ನ ಧರ್ಮಾಯ ನ ಶಾಂತಯೇ ।**
**ಸುಬದ್ಧಮಪಿ ಶಬ್ದೇನ**
**ಕಾಕವಾಶಿತಮೇವ ತತ್ ॥**

ವೈರಾಗ್ಯ, ಧರ್ಮ ಅಥವಾ ಶಾಂತಿಗೆ ಉಪಯುಕ್ತವಾಗದ ವಿಚಾರವು ಎಷ್ಟು ಶಬ್ದಜಾಲದಿಂದ ರಚಿತವಾಗಿದ್ದರೂ ಅದು ಕಾಗೆಯ ಕೂಗೇ ಸರಿ. — ಮಹಾಭಾರತ

ಜಗತ್ತು ಹೇಳುತ್ತದೆ, ''ಪ್ರಯತ್ನ ಸಾಕು, ಬಿಟ್ಟುಬಿಡು.'' ಆಗ ಭರವಸೆ ಹೇಳುತ್ತದೆ, ''ಇನ್ನೊಂದು ಬಾರಿ ಯತ್ನಿಸು.''

— ಅಜ್ಞಾತ

ಎಲ್ಲಿ ದ್ವೇಷವಿದೆಯೋ ಅಲ್ಲಿ ನಾನು ಪ್ರೀತಿಯನ್ನು ಬಿತ್ತುವೆ. ಎಲ್ಲಿ ಗಾಯವಿದೆಯೋ ಅಲ್ಲಿ ಕ್ಷಮೆಯನ್ನು ಬಿತ್ತುವೆ. ಎಲ್ಲಿ ಸಂದೇಹವಿದೆಯೋ ಅಲ್ಲಿ ವಿಶ್ವಾಸವನ್ನು ಬಿತ್ತುವೆ.

— ಅಸ್ಸಿಸಿಯ ಸಂತ ಫ್ರಾನ್ಸಿಸ್

ಒಂದು ವೇಳೆ ನಮ್ಮ ಇಂದ್ರಿಯಗಳ ಬಾಗಿಲುಗಳು ಶುದ್ಧವಾದರೆ, ನಾವು ನೋಡುವ ಪ್ರತಿಯೊಂದೂ ನಮಗೆ ಅನಂತವಾಗಿ ಕಾಣುವುವು. — ವಿಲಿಯಂ ಬ್ಲೇಕ್

ಇನ್ನೊಬ್ಬರನ್ನು ಸೋಲಿಸುವುದು ಸುಲಭ; ಆದರೆ ಇನ್ನೊಬ್ಬರನ್ನು ಗೆಲ್ಲುವುದು ಕಷ್ಟ. — ಡಾ. ಅಬ್ದುಲ್ ಕಲಾಂ